## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 767(899)

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 24.07.2024

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ 1979-80 ರಲ್ಲಿ ವರ್ಗಾವಯಿಸಿದ್ದ ಕಳ್ಳಂಬೆಳ್ಳ ಹೋಬಳಿಯ ಹುಂಜನಾಳೂ, ಸಿಬಿ ಹಾಗೂ ಬೋರಸಂದ್ರ ಸರ್ವೆ ನಂಬರುಗಳನ್ನು ಕಂದಾಯ ಇಲಾಖೆಗೆ ವಾಪಸ್ ಪಡೆಯಲು ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:202/95 ರಲ್ಲಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಸೇರಿಸಲಾಗಿದೆಯೇ: | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ಇಲಾಖೆ ರವರು ಸಲ್ಲಿಸಿರುವಂತೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ 1979-80ರಲ್ಲಿ ಯಾವುದೇ ಜಮೀನು ವರ್ಗಾಯಿಸಿರುವುದಿಲ್ಲ. |
| ಆ) | ಕಳ್ಳಂಬೆಳ್ಳ ಹೋಬಳಿಯ ಹುಂಜನಾಳು, ಸರ್ವೆ ನಂಬರು 161, 203ರಲ್ಲಿ ಬಗರ್ ಹುಕುಂ ಸಾಗುವಳಿ ಅಕ್ರಮ ಸಕ್ರಮಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ: (ಹೆಸರು, ವಿಳಾಸ, ಅರ್ಜಿ ಕ್ರಮ ಸಂಖ್ಯೆ ಹಾಗೂ ದಿನಾಂಕದೊಂದಿಗೆ ಮಾಹಿತಿ ನೀಡುವುದು) | ಕಳ್ಳಂಬೆಳ್ಳ ಹೋಬಳಿ ಹುಂಜನಾಳು ಗ್ರಾಮದ ಸ.ನಂ.161, 203 ರಲ್ಲಿ ಬಗರ್ ಹುಕುಂ ಸಾಗುವಳಿ ಅಕ್ರಮ ಸಕ್ರಮಕ್ಕೆ ಸಂಬಂಧಿಸಿದಂತೆ ನಮೂನೆ-57 ರಲ್ಲಿ ಒಟ್ಟು 41 ಅರ್ಜಿಗಳು ಸಲ್ಲಿಕೆಯಾಗಿರುತ್ತವೆ. ಅರ್ಜಿದಾರರ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಕಳ್ಳಂಬೆಳ್ಳ ಹೋಬಳಿಯ, ಸಿಬಿ ಸರ್ವೆ 190 ಹಾಗೂ ಹುಂಜನಾಳು ಸರ್ವೆ ನಂಬರುಗಳಲ್ಲಿ ಕಂದಾಯ ಇಲಾಖೆಯ ಪ್ರಸ್ತುತ ವಶದಲ್ಲಿರುವ ಜಮೀನೆಷ್ಟು? (ಎಕರೆವಾರು ಪಟ್ಟಿ ನೀಡುವುದು | ಕಳ್ಳಂಬೆಳ್ಳ ಹೋಬಳಿಯ ಸಿಬಿ ಸ.ನಂ.190 ರಲ್ಲಿ ಪಹಣಿ ಪತ್ರಿಕೆಯಂತೆ 83.15 ಎಕರೆ/ಗುಂಟೆ ಪೈಕಿ 71-00 ಎಕರೆ/ಗುಂಟೆ ಅರಣ್ಯ ಇಲಾಖೆಯ ವಶದಲ್ಲಿದ್ದು 8-51 ಎಕರೆ/ಗುಂಟೆ ಸರ್ಕಾರಿ ಖರಾಬು ಜಮೀನಿರುತ್ತದೆ ಹಾಗೂ ರಾಮಚಂದ್ರಪ್ಪ ಬಿನ್ ನರಸಿಂಹ ನಾಯ್ಕ ರವರಿಗೆ 4-00 ಎಕರೆ ಮಂಜೂರಾತಿಯಾಗಿರುತ್ತದೆ.<br><br>ಕಂದಾಯ ಇಲಾಖೆಯ ವಶದಲ್ಲಿರುವ ಹುಂಜನಾಳು ಗ್ರಾಮದಲ್ಲಿನ ಸರ್ವೆ ನಂಬರ್‌ಗಳ ಜಮೀನಿನ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಕಂಇ 64 ಎಲ್‌ಜಿಟಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು